1. ಬಿಳಿಗಿರಿರಂಗನ ಬೆಟ್ಟದಲ್ಲಿ ಯಾತ್ರಿನಿವಾಸ ನಿರ್ಮಾಣ ಮಾಡಲು 2007–08ನೇ ಸಾಲಿನಲ್ಲಿ ರೂ.100.00ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಚಾಮರಾಜನಗರ ರವರಿಗೆ ಬಿಡುಗಡೆ ಮಾಡಲಾಗಿದೆ.
2. ಮಲೈಮಹದೇಶ್ವರ ಬೆಟ್ಟದಲ್ಲಿ ಯಾತ್ರಿನಿವಾಸ ನಿರ್ಮಾಣಕ್ಕಾಗಿ 2007–08ನೇ ಸಾಲಿನಲ್ಲಿ ರೂ.100.00ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಚಾಮರಾಜನಗರ ರವರಿಗೆ ಬಿಡುಗಡೆ ಮಾಡಲಾಗಿದೆ.
3. ಚಾಮರಾಜನಗರ ಜಿಲ್ಲೆಯ ಬಂಡೀಪುರ, ಹಿಮವದ್ ಗೋಪಾಲಸ್ವಾಮಿ ಬೆಟ್ಟ ಹಾಗೂ ಮಧ್ಯರಂಗದ ರಂಗನಾಥಸ್ವಾಮಿ ದೇವಾಲಯಗಳ ಬಳಿ ತಲಾ ರೂ.12.70ಲಕ್ಷಗಳ ವೆಚ್ಚದಲ್ಲಿ ಶೌಚಾಲಯಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗಿದೆ.
4. ಚಾಮರಾಜನಗರ ಜಿಲ್ಲೆಯ ಹೊಗೆನಕಲ್ ಜಲಪಾತ ಪ್ರದೇಶದಲ್ಲಿ ಸ್ನಾನಗೃಹಗಳು, ಶೌಚಾಲಯ, ಬಟ್ಟೆ ಬದಲಿಸುವ ಕೋಣೆಗಳು, ವಾಹನ ನಿಲ್ದಾಣ, ಪರಗೋಲಗಳ ನಿರ್ಮಾಣ, ಇಂಟರ್ ಪ್ರಿಟೇಷನ್ ಸೆಂಟರ್, ಉಪಹಾರಗೃಹಗಳ ನಿರ್ಮಾಣ, ಬೋಟಿಂಗ್ ಸೌಲಭ್ಯ ಒದಗಿಸಲು ಫ್ಲಾಟ್ ಫಾರಂ ನಿರ್ಮಾಣ, ವಾಚ್ ಟವರ್ ನಿರ್ಮಾಣ, ತಂತಬೇಲಿ ನಿರ್ಮಾಣ, ಪ್ರವಾಸಿ ಮಾರ್ಗದರ್ಶಿಫಲಕಗಳು ಹಾಗೂ ಟ್ರಕ್ಕಿಂಗ್ ಟ್ರಯಲ್ಸ್ ಅಭಿವೃದ್ಧಿಪಡಿಸಲು ರೂ.50.00ಲಕ್ಷಗಳನ್ನು 2008–09ನೇ ಸಾಲಿನಲ್ಲಿ ಅರಣ್ಯ ಇಲಾಖೆಗೆ ಬಿಡುಗಡೆ ಮಾಡಲಾಗಿದೆ.
5. ಚಾಮರಾಜನಗರ ಜಿಲ್ಲೆಯ ಕರಿವರದರಾಜ ಬೆಟ್ಟದಲ್ಲಿ ರೂ.30.00 ಲಕ್ಷಗಳಲ್ಲಿ ಪ್ರವಾಸಿ ಸೌಲಭ್ಯವನ್ನು ಒದಗಿಸಲು ಪರಿಶೀಲಿಸಲಾಗುತ್ತಿದೆ.
6. ಚಾಮರಾಜನಗರ ಜಿಲ್ಲೆಯ ಶಿವನಸಮುದ್ರದ ಮಧ್ಯರಂಗ ದೇವಾಲಯದ ಬಳಿ ರೂ. 56.42ಲಕ್ಷಗಳಲ್ಲಿ ಯಾತ್ರಿನಿವಾಸ ನಿರ್ಮಾಣಕ್ಕೆ ಪ್ರಸ್ತಾವನೆ ಪರಿಶೀಲಿಸಲಾಗುತ್ತಿದೆ.

**70 ಶ್ರೀ ಮಹದೇವ ಪ್ರಸಾದ ಹೆಚ್.ಎಸ್.**

**ಡಾ॥ವಿ.ಎಸ್.ಆಚಾರ್ಯ (ಗೃಹ ಸಚಿವರು)**

1) ಗುಂಡ್ಲುಪೇಟೆ ತಾಲೂಕು ಬೇಗೂರು ಹೋಬಳಿ, ಬೇಗೂರು ಗ್ರಾಮದ ಔಟ್ ಪೋಸ್ಟ್ ಪೊಲೀಸ್ ಠಾಣೆಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ.

ಹೌದು

2) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು.

ಈಗಿನ ಭಯೋತ್ಪಾದಿತರ ಹಾಗೂ ಇತರ ಅಪರಾಧದ ತೀವ್ರತೆಗಳನ್ನು ಪರಿಗಣಿಸಿ ರಾಜ್ಯದಲ್ಲಿ ಹೊಸ ಪೊಲೀಸ್ ಠಾಣೆ, ಹೊರಠಾಣೆ ಮತ್ತು ಹೊರಠಾಣೆ ಮೇಲ್ದಜೇಗೇರಿಸುವ ಪ್ರಸ್ತಾವಣೆಗಳನ್ನು ಪರಿಗಣಿಸಲು ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ರೂಪಿಸಲು ನಿವೃತ್ತ ಡಿ.ಜಿ.ಪಿ. ಶ್ರೀ.ಎಸ್.ಮರೀಸ್ವಾಮಿ ಇವರ

ಅಧ್ಯಕ್ಷತೆಯಲ್ಲಿ ಒಂದು ತಜ್ಞರ ಸಮಿತಿಯನ್ನು ರಚಿಸಲು ಪತ್ರ ಸಂಖ್ಯೆ ಹೆಚ್.ಡಿ/207/ಪಿಒಪಿ/2008 ದಿನಾಂಕ:31-12-2008ರಲ್ಲಿ ಸರ್ಕಾರದ ಅನುಮತಿ ನೀಡಿದೆ. ಈ ಸಮಿತಿಯು ನೀಡುವ ವರದಿಯ ಆಧಾರದ ಮೇಲೆ ಸೂಕ್ತ ಮಾರ್ಗಸೂಚಿಗಳನ್ನು ರೂಪಿಸಿ, ಅದರನ್ವಯ ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.

**85 ಶ್ರೀ ಜಯಚಂದ್ರ ಟಿ.ಬಿ. (ಶಿರಾ)**

**ಆನಂದ ವಸಂತ ಅಸ್ನೋಟಿಕರ (ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)**

ಅ) ಶಿರಾ ತಾಲೂಕಿನಲ್ಲಿ ಮೀನುಗಾರಿಕೆ ಸಾಕಾಣಿಕೆಗಾಗಿ ಇಲಾಖೆಯ ಅಧೀನದಲ್ಲಿರುವ ಕೆರೆಗಳೆಷ್ಟು; ಅವು ಯಾವುವು;

ಶಿರಾ ತಾಲೂಕಿನಲ್ಲಿ ಒಟ್ಟು 54 ಇಲಾಖಾ ವ್ಯಾಪ್ತಿಯ ಕೆರೆಗಳಿವೆ. ವಿವರಗಳನ್ನು ಲಗತ್ತಿಸಲಾಗಿದೆ.

ಆ) ಇದರಿಂದ ಸರ್ಕಾರಕ್ಕೆ ಬಂದ ಆದಾಯವೆಷ್ಟು;

2008-09ನೇ ಸಾಲಿನಲ್ಲಿ ರೂ.3.23.770-00 ಆದಾಯ ಬಂದಿದೆ.

ಇ) ಕೆರೆಗಳನ್ನು ಯಾವ ಆಧಾರದ ಮೇಲೆ ಮೀನು ಸಾಕಾಣಿಕೆಗೆ ಗುತ್ತಿಗೆಯನ್ನು ನೀಡಲಾಗುತ್ತದೆ;

ಸರ್ಕಾರದ ಆದೇಶ ಸಂಖ್ಯೆ:ಪಸಂಮೀ/167/ಮೀಇಇ/2005 ದಿನಾಂಕ: 28-01-20906ರ ಆಧಾರದ ಮೇಲೆ ನೀಡಲಾಗುತ್ತಿದೆ.

ಈ) ಗುತ್ತಿಗೆಯನ್ನು ನವೀಕರಿಸುವಾಗ ಬೇರೆಯವರಿಗೆ ಅವಕಾಶ ನೀಡಿ ಮುಕ್ತ ಹರಾಜಿನ ಮೂಲಕ ಗುತ್ತಿಗೆ ನೀಡುವುದರಿಂದ ಹೆಚ್ಚಿನ ಆದಾಯ ಸರ್ಕಾರಕ್ಕೆ ಬರವುದಿಲ್ಲವೇ; ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಸರ್ಕಾರ ನಿಗದಿಪಡಿಸಿರುವ ಗುತ್ತಿಗೆ ನಿಯಮಗಳ ಪ್ರಕಾರ ಗುತ್ತಿಗೆಯನ್ನು ನವೀಕರಿಸಲಾಗುತ್ತಿದೆ. ಟೆಂಟರ್/ಹರಾಜು ಮೂಲಕ ಗುತ್ತಿಗೆ ನೀಡಿದಲ್ಲಿ ಹೆಚ್ಚಿನ ಆದಾಯ ನಿರೀಕ್ಷಿಸಬಹುದು. ಆದರೆ, ಮೀನುಗಾರಿಕೆಯನ್ನೇ ಅವಲಂಬಿಸಿ ರಚಿಸಿಕೊಂಡ ಮೀನುಗಾರರ ಸಹಕಾರಿ ಸಂಘಗಳ ಮೂಲಕ ಮೀನುಗಾರರು ವೃತ್ತಿ ಜೀವನ ನಡೆಸಿಕೊಂಡು ಹೋಗಲು ಅನುವಾಗುವಂತೆ ಮಿತಿಗೊಳಪಡಿಸಿ ಕೆರೆಗಳ ಗುತ್ತಿಗೆ ನೀಡಲಾಗುತ್ತಿದೆ.

**2008-09ನೇ ಸಾಲಿನಲ್ಲಿ ಶಿರಾ ತಾಲೂಕಿನಲ್ಲಿ ವಿಲೇವಾರಿಯಾದ ಕೆರೆಗಳು ವಿವರಗಳು**

| ಕ್ರ ಸಂ | ಕೆರೆಯ ಹೆಸರು | ಜಲ ವಿಸ್ತೀರ್ಣ | ಅಚ್ಚುಕಟ್ಟು | 2008-09ನೇ ಸಾಲಿನ ಗುತ್ತಿಗೆ ಬಿಡ್ ಮೊತ್ತ | ಗುತ್ತಿಗೆ / ಬಿಡ್‌ದರರು ಹೆಸರು |
|---|---|---|---|---|---|
| 1 | ಚಿಕ್ಕಸಂದ್ರ ಕೆರೆ | 207.52 | 406.30 | 17886-00 | ಮೀನುಗಾರಿಕೆ ಕೆರೆ ಅಭಿವೃದ್ಧಿ ಸಂಘ, |